**ECA . No: 03/2022**
**C/w ECA.No:02/2022 &**
**ECA No: 04/2022**
**ಪಿ.ಡಬ್ಲ್ಯೂ 2, ಅನೀಲಕುಮಾರ**

ದಿನಾಂಕ : **20-01-2024** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಪಾಟಿ ಸವಾಲು :- ಶ್ರೀ ಬಿ ಎಸ್ ಕೆ ವಕೀಲರಿಂದ

ನಾನು ಅಪಘಾತಕ್ಕಿಂತ ಮೊದಲು ಸುಮಾರ 1 ತಿಂಗಳ ಕಾಲ 1 ನೇ ಎದುರುದಾರರ ಹತ್ತಿರ ಲಾರಿ ಚಾಲಕನಾಗಿ ಕೆಲಸ ಮಾಡಿರುತ್ತೇನೆ. ನಾನು ಕೆಎ-56- 3748 ಲಾರಿಗೆ ಚಾಲಕನಾಗಿದ್ದೆ. ನಾನು ಲೈಸನ್ಸ ಹೊಂದಿದ್ದೆ ಅದನ್ನು ಚಿಂಚೋಳಿ ಪೋಲಿಸ ಠಾಣೆಯಲ್ಲಿ ಕೊಟ್ಟಿರುತ್ತೇನೆ. ನಾನು ಪುನ: ಪೋಲಿಸ ಠಾಣೆಗೆ ಹೋಗಿಲ್ಲಾ. ನನ್ನ ಬಳಿ ಜರಾಕ್ಸ ಕಾಪಿ ಇದ್ದು ಅದನ್ನು ನ್ಯಾಯಾಲಯದಲ್ಲಿ ಹಾಕಿರುತ್ತೇನೆ. ಸಾಕ್ಷಿಯು ಜರಾಕ್ಸ ಪ್ರತಿಯನ್ನು ವಕೀಲರಿಗೆ ತೋರಿಸಿರುತ್ತಾರೆ. ನನಗೆ ಲಾರಿ ಓಡಿಸಲು ಲೈಸನ್ಸ ಇತ್ತು ಎಂದು ಸುಳ್ಳು ಹೇಳಿದ್ದೇನೆ ಅಂದರೆ ಸರಿಯಲ್ಲ. ನನಗೆ ಸೂಕ್ತವಾದ ಲೈಸನ್ಸ ಇರಲಿಲ್ಲಾ ಎನ್ನವುದು ಸರಿಯಲ್ಲ.

ನಾನು ಕೆಲಸಕ್ಕೆ ಸೇರಿ ಇನ್ನು ಒಂದು ತಿಂಗಳು ಆಗಿರಲಿಲ್ಲಾ ಅಷ್ಟರಲ್ಲಿ ಅಪಘಾತ ಆಗಿತ್ತು ನನಗೆ ಸಂಬಳ ಇನ್ನು ಕೊಟ್ಟಿರಲಿಲ್ಲಾ. 1 ನೇ ಎದುರದಾರರು ನನಗೆ ತಿಂಗಳಿಗೆ ರೂ.20,000/- ಸಂಬಳ, ರೂ. 500/- ಭತ್ಯೆ ಪ್ರತಿ ದಿನ ಕೊಡುತ್ತಿದ್ದರು ಎಂದು ಸುಳ್ಳು ಹೇಳಿದ್ದೆನೆ ಅಂದರೆ ಸರಿಯಲ್ಲ. ಅಪಘಾತ ದಿನ ಎದುರುದಾರರ ವಾಹನದಲ್ಲಿ ನಾನು ಚಾಲಕನಾಗಿ ಇರಲಿಲ್ಲಾ ಎಂದರೆ ಸರಿಯಲ್ಲ. ನನ್ನ ಹಾಗೂ 1 ನೇ ಎದುರದಾರರ ನಡುವೆ ಮಾಲಿಕ ಕಾರ್ಮಿಕ ಸಂಬಂಧ ಇಲ್ಲಾ ಎನ್ನುವುದು ಸರಿಯಲ್ಲ. ನಾನು ಮತ್ತು ಇ.ಸಿ.ಎ. 02/2022 ಮತ್ತು 04/2022 ಪ್ರಕರಣದ ಅರ್ಜಿದಾರರರು ಲಾರಿಯಲ್ಲಿ ಚಾಲಕರು ಮತ್ತು ಕ್ಲೀನರ್ ಆಗಿ ಹೋಗುತ್ತಿದ್ದೇವು ಎಂದು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. ನಾನು ಆ ದಿನ ಅನಧೀಕೃತ ಪ್ರಯಾಣಿಕನಾಗಿ ಲಾರಿಯಲ್ಲಿ ಹೋಗುತ್ತಿದ್ದೆ ಎಂದರೆ ಸರಿಯಲ್ಲ. ಆದಿನ ಲಾರಿ ಚಾಲಕನಿಗೆ ಡಿ.ಎಲ್ ಇಲ್ಲದ ಕಾರಣ ನನ್ನನ್ನು ಚಾಲಕನಾಗಿ ತೋರಿಸಿದ್ದಾರೆಂದು ಸೂಚಿಸುವುದು ಸರಿಯಲ್ಲ.

ಆ ದಿನ ನಾನು ಚೆನ್ನೈಗೆ ಹೋಗುತ್ತಿದ್ದೆ, ಅಪಘಾತವು ಚಿಂಚೋಳಿ ತಾಲೂಕು ತುಮಕುಂಟಾ ಘಾಟನಲ್ಲಿ ಆಗಿರುತ್ತದೆ. ಮೊದಲಿಗೆ ನಮಗೆ ಸರಕಾರಿ ಆಸ್ಪತ್ರ ಗೆ ಚಿಂಚೋಳಿಗೆ ತೋರಿಸಿದರು, ನಂತರ ಅದೇ ದಿನ ಮಣೂರ ಆಸ್ಪತ್ರೆಗೆ ದಾಖಲು ಮಾಡಿರುತ್ತಾರೆ. ಸದರಿ ಆಸ್ಪತ್ರೆಯಲ್ಲಿ ನಾನು 3 ದಿನ ಚಿಕಿತ್ಸೆ ಪಡೆದಿರುತ್ತೇನೆ. ನನಗೆ ಕೈಗೆ ಗಾಯ ಆಗಿದ್ದು ಈಗ ಸಂಪೂರ್ಣ ವಾಸಿ ಆಗಿದೆ ಎನ್ನುವುದು ಸರಿಯಲ್ಲ. ನಾನು ಮೊದಲಿನಂತೆ ಕೆಲಸ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ.

**ECA . No: 03/2022**
**C/w ECA.No:02/2022 &**
**ECA No: 04/2022**

**ಪಿ.ಡಬ್ಲ್ಯೂ: 2, ಅನೀಲಕುಮಾರ**

ನಾನು ಸಂಪೂರ್ಣ ಗುಣಮುಖನಾಗಿದ್ದು, ನನಗೆ ಯಾವುದೇ ರೀತಿ ಅಂಗ ನ್ಯೂನ್ಯತೆ ಇಲ್ಲಾ ಎನ್ನುವುದು ಸರಿಯಲ್ಲ. ಅಸ್ಪತ್ರೆಯಿಂದ ಬಿಡುಗಡೆ ಆದ ನಂತರ ಮುಮದುವರೆದ ಚಿಕಿತ್ಸೆ ಪಡೆದಿರುತ್ತೇನೆ. ಆ ಬಗ್ಗೆ ದಾಖಲೆ ಹಾಕಿಲ್ಲಾ. ನನಗೆ ಡಿಸಚಾರ್ಜ ಸಮರಿ ಕೊಟ್ಟಿದ್ದರು ಆದರೆ ಅದನ್ನು ಹಾಜರು ಪಡಿಸಿಲ್ಲಾ. ನಾನು ಕೇಳಿರುವ ಪರಿಹಾರ ಮೊತ್ತವು ನನಗೆ ಆಗಿರುವ ಗಾಯಕ್ಕೆ ಸರಿಸಮಾನವಾಗಿ ಇಲ್ಲಾ ಎನ್ನುವುದು ಸರಿಯಲ್ಲ. ನಾನು ಈಗ ನನಗೆ ಲಾರಿ ಓಡಿಸಲು ಆಗುವುದಿಲ್ಲಾ ಎಂದು ಆರ್ ಟಿ ಓ ರವರಿಗೆ ಲೈಸನ್ಸ ರದ್ದು ಮಾಡುವಂತೆ ಮನವಿ ಸಲ್ಲಿಸಿಲ್ಲಾ. ನಾನು ಈಗಲೂ ಕೂಡಾ ಲಾರಿ ಓಡಿಸುತ್ತಿದ್ದು ಆದ ಕಾರಣ ಲೈಸನ್ಸ ಸರೆಂಡರ್ ಮಾಡಿಲ್ಲಾ ಎನ್ನವುದು ಸರಿಯಲ್ಲ. ನನಗೆ ಸಾದಾ ಗಾಯ ಆಗಿರುವುದರಿಂದ ನಾನು ಸಲ್ಲಿಸಿರುವ ಅರ್ಜಿ ಉರ್ಜಿತ ಅಲ್ಲಾ ಎನ್ನುವುದು ಸರಿಯಲ್ಲ. ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ. ನನಗೆ ಈಗಾಗಲೇ ರೂ. 3,50,000/- ಖರ್ಚು ಆಗಿದ್ದು, ಇನ್ನು ರೂ. 1,50,000/- ಖರ್ಚು ಇದೆ ಎಂದು ಸುಳ್ಳು ಹೇಳಿದ್ದೇನೆ ಅಂದರೆ ಸರಿಯಲ್ಲ. ನಾನು ಆ ಬಗ್ಗೆ ಬಿಲ್ಲ ಹಾಕಿಲ್ಲಾ ಎನ್ನವುದು ಸರಿ.

ಮರು ವಿಚಾರಣೆ : ಇಲ್ಲಾ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ.ಸರಿ.ಇದೆ.**

ಹಿರಿಯ ಸಿವಿಲ್ ನ್ಯಾಯಾಧೀಶರು
ಚಿತ್ತಾಪೂರ.